


ಗೊಬ್ಬರದ ಮರ

# ಬೇಸಿಗೆ ಬೆಡಗಿಯರು

## ಕರಿವರದರಾಜ ವೃಕ್ಷವನದಲ್ಲಿ ಹೂಗಳ ತೇರು

**ಕುರುಚಲು ಕಾಡಿನ ಈ ಪುಟ್ಟ ಬೆಟ್ಟದಲ್ಲಿ ಬಿರುಬಿಸಿಲಿನಲ್ಲೂ ಹೊಳೆಯುವ ಈ ಸುರ ಸುಂದರಿಯರನ್ನು ನೋಡಿದರೆ ಕಣ್ಣು, ಮನಸ್ಸುಗಳೆರಡೂ ತಂಪಾಗುತ್ತವೆ.**

■ ಡಾ. ಕವಿತ ಬಿ.ಟಿ.

ಕರಿವರದರಾಜ ವೃಕ್ಷವನ; ಬಿಳಿಗಿರಿರಂಗನ ಬೆಟ್ಟ ಹುಲಿ ಸಂರಕ್ಷಣಾ ಮೀಸಲು ಪ್ರದೇಶ ಮತ್ತು ವನ್ಯಜೀವಿ ಅಭಯಾರಣ್ಯ ವ್ಯಾಪ್ತಿಯಲ್ಲಿ ಬರುವ ಕುರುಚಲು ಕಾಡಿನ ಚಿಕ್ಕ ಬೆಟ್ಟ.

ನಾನು ಕಾರ್ಯನಿರ್ವಹಿಸುವ ಪೊಲೀಸ್ ಇಲಾಖೆಯ ಪ್ರಮುಖ ಅಗತ್ಯಗಳಲ್ಲಿ ದೈಹಿಕ ಕ್ಷಮತೆ ಮತ್ತು ಶಿಸ್ತು ಅತೀವ ಪ್ರಾಮುಖ್ಯ ಗಳಿಸಿಕೊಂಡಿರುವಂಥವು. ಇದರ ಸಾಧನೆಗಾಗಿ ಇಲಾಖಾ ಅಧಿಕಾರಿ ಮತ್ತು ಸಹೋದ್ಯೋಗಿ ಸಿಬ್ಬಂದಿಗಾಗಿ ಕರಿವರದರಾಜ ವೃಕ್ಷವನಕ್ಕೆ ಚಾರಣ ಕೈಗೊಳ್ಳಲಾಗುತ್ತದೆ. ಹವಾಮಾನದ ಭಿನ್ನ ಕಾಲಗಳಲ್ಲಿ ವಿಶಿಷ್ಟವಾಗಿ ಸೆಳೆಯುವ ಪ್ರಕೃತಿ ಇಲ್ಲಿಯೂ ತನ್ನ ವೈವಿಧ್ಯದಿಂದ ಸದಾ ನಮ್ಮನ್ನು ಉತ್ಸಾಹಿಗಳನ್ನಾಗಿರಿಸಿದೆ.

ಮಳೆಗಾಲದಲ್ಲಿ ಹಸುರಿನ ಹೊದಿಕೆಯಿಂದ ಕಣ್ಣು ತಂಪಾಗಿಸುತ್ತಿದ್ದ ಮರಗಿಡಗಳು ಚಳಿಯ ನಡುವೆ ಕಾಡುಹಣ್ಣುಗಳ ಸ್ವಾದ ಸವಿಯಲು ಅನುವು ಮಾಡಿಕೊಟ್ಟಿದ್ದವು. ಬೇಸಿಗೆ ಕಾಲದಲ್ಲಿ ಚೈತ್ರ ಋತುವಿನ ಆಗಮನ ಪ್ರಕೃತಿಯ ಮತ್ತೊಂದು ಮಗ್ಗುಲಿನ ಪರಿಚಯ ಮಾಡುತ್ತದೆ. ಸಣ್ಣ ಸಣ್ಣ ಸೂರಕ್ಕಿಗಳು, ಪಕ್ಷಿ ಸಂಕುಲ, ರಾತ್ರಿ ವೇಳೆಯಲಿ ಓಡಾಟ ನಡೆಸಿದ ಪ್ರಾಣಿಗಳ ಹೆಜ್ಜೆ ಗುರುತುಗಳು ಚಾರಣದ ಬಳಲಿಕೆಯನ್ನು ಹೋಗಲಾಡಿಸುತ್ತಿವೆ.

ಸದಾ ಉಲ್ಲಾಸ ತುಂಬುವ ಪ್ರಕೃತಿಯ ಸೆಳೆತಕ್ಕೆ ಹೊಸ ಸೇರ್ಪಡೆ ಬೇಸಿಗೆಯಲ್ಲಿ ಅರಳಿ ನಿಂತಿರುವ ಕರಿವರದರಾಜ ಬೆಟ್ಟದ ಹೂ ರಾಣಿಯರು. ಬನ್ನಿ, ಕರಿವರದರಾಜನ ಪ್ರಿಯಸಖಿಯರಲ್ಲಿ ಕೆಲವರನ್ನು ಪರಿಚಯಿಸಿಕೊಳ್ಳೋಣ.

### ಕಾಡು ಮಲ್ಲಿಗೆ

ದಕ್ಷಿಣ ಆಫ್ರಿಕಾ ಮೂಲದ ಈ ಸಸ್ಯವನ್ನು ಸ್ಥಳೀಯವಾಗಿ ‘ಕಾಡು ಮಲ್ಲಿಗೆ’ ಎಂದು ಕರೆಯಲಾಗುತ್ತದೆ. ಇದರ ವೈಜ್ಞಾನಿಕ ಹೆಸರು ‘ಜಾಸ್ಮಿನಮ್ ಮಲ್ಟಿಪಾರ್ಟಿಟಮ್’. ‘ಸ್ಟರ್ರಿ ವೈಲ್ಡ್ ಜಾಸ್ಮಿನ್’ ಎಂಬ ಇಂಗ್ಲಿಷ್ ಹೆಸರಿನ ಇದರ ಹೂವು



ಮತ್ತು ಎಲೆಗಳನ್ನು ಗಿಡಮೂಲಿಕೆಯ ಚಹಾ ತಯಾರಿಸಲು ಬಳಸಲಾಗುತ್ತದೆ. ಮಲ್ಲಿಗೆಯಂತೆ ಪರಿಮಳವೂ ಬೀರುವುದರಿಂದ ಪರಿಮಳಯುಕ್ತ ಸ್ನಾನಕ್ಕಾಗಿ ಬಳಸಲಾಗುತ್ತದೆ.

ಸುವಾಸನೆಯ ಪಾನೀಯಗಳು, ಸಿಹಿ ತಿಂಡಿಗಳು, ಕ್ಯಾಂಡಿ, ಬೇಯಿಸಿದ ಸರಕುಗಳು, ಜಿಲೆಟಿನ್ ಮತ್ತು ಪುಡ್ಡಿಂಗ್‌ಗಳಲ್ಲಿ ಬಳಸಲಾಗುತ್ತದೆ. ಸುಗಂಧದ್ರವ್ಯಗಳ ಉತ್ಪಾದನೆಯಲ್ಲಿ ವ್ಯಾಪಕವಾಗಿ ಬಳಸಲಾಗುತ್ತದೆ. ಪರಾಗಸ್ಪರ್ಶಕಗಳನ್ನು ಆಕರ್ಷಿಸುವುದರಿಂದ ಜೇನುನೊಣಗಳ ಆಹಾರಕ್ಕಾಗಿ ಬಳಸಲಾಗುತ್ತದೆ.